# ಬನ್ನಿ, ದಕ್ಷಿಣೇಶ್ವರಕ್ಕೆ

ಸ್ವಾಮಿ ಆಶುತೋಷಾನಂದ



## ಸ್ನಾನಘಟ್ಟ

ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ತಮ್ಮ ಆರಂಭದ ದಿನಗಳಲ್ಲಿ ಇದ್ದ ಕೊಠಡಿಯ ದರ್ಶನ ಪಡೆದುಕೊಂಡೆವು. ಇಲ್ಲಿಂದ ಉತ್ತರ ದಿಕ್ಕಿಗೆ ಹೋದರೆ ಪಂಚವಟಿಯನ್ನು ತಲುಪುತ್ತೇವೆ. ಅದು ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿದ ಸ್ಥಳ. ಮಾರ್ಗಮಧ್ಯದಲ್ಲಿ, ನಹಬತ್ತಿಗೆ ಕೊಂಚ ದೂರದಲ್ಲಿ ನಮ್ಮ ಎಡಗಡೆಗೆ 'ಬಕುಲತಲ ಸ್ನಾನಘಟ್ಟ'ವನ್ನು ಕಾಣುತ್ತೇವೆ. ಬಕುಲ ವೃಕ್ಷಗಳ ಹತ್ತಿರ ಈ ಘಟ್ಟವಿರುವುದರಿಂದ ಅದಕ್ಕೆ ಆ ಹೆಸರು ಬಂದಿದೆ. ಶ್ರೀಮಾತೆಯವರು ಪ್ರಾತಃಕಾಲದಲ್ಲಿ ಇಲ್ಲಿಗೆ ಬಂದು ಸ್ನಾನಮಾಡುತ್ತಿದ್ದರು. ಒಂದು ದಿನ, ಅದೆಷ್ಟು ಕತ್ತಲಾಗಿತ್ತೆಂದರೆ, ಅವರು ಒಂದು ಮೊಸಳೆಯ ಮೇಲೆ ಕಾಲಿಟ್ಟುಬಿಡುತ್ತಿದ್ದರು. ಅದೃಷ್ಟವಶಾತ್ ಗೊತ್ತಾಗಿ, ಕಾಲೆಳೆದುಕೊಂಡರು. ಶ್ರೀರಾಮಕೃಷ್ಣರಿಗೆ ಇದು ತಿಳಿದುಬಂತು. ಅವರು ಒಂದು ಲಾಟೀನನ್ನು ತೆಗೆದುಕೊಂಡು ಹೋಗುವಂತೆ ಮಾತೆಯವರಿಗೆ ಹೇಳಿದರು. ಶ್ರೀರಾಮಕೃಷ್ಣರು ತಮ್ಮ ತಾಂತ್ರಿಕ ಸಾಧನೆಗಳ ಗುರುವಾದ ಭೈರವೀ ಬ್ರಾಹ್ಮಣಿಯನ್ನು ಮೊದಲು ಕಂಡದ್ದು ಇಲ್ಲಿಯೇ.

## ಪಂಚವಟಿ

ನಾವಿನ್ನು ಉತ್ತರ ದಿಕ್ಕಿನ ಕಡೆಗೆ ಹೋಗೋಣ. ಕೆಲವೇ ಅಡಿಗಳ ಅಂತರದಲ್ಲಿ, ನಮ್ಮ ಬಲಭಾಗದಲ್ಲಿ ಒಂದೆರಡು ಆಲದ ಮರಗಳನ್ನು, ಒಂದು ಕುಟೀರವನ್ನು, ಜೀರ್ಣಾವಸ್ಥೆಯಲ್ಲಿರುವ ಒಂದು ದಿಬ್ಬವನ್ನು ನೋಡುತ್ತೇವೆ. ಇವೆಲ್ಲವೂ ಇರುವ ಜಾಗಕ್ಕೆ ಬೇಲಿ ಹಾಕಿದ್ದಾರೆ. ಇವೆಲ್ಲವೂ ಐತಿಹಾಸಿಕ 'ಪಂಚವಟಿ'ಯ ಪಳೆಯುಳಿಕೆಗಳು. 'ಪಂಚವಟಿ' ಎಂದರೆ ಐದು ಬಗೆಯ ಮರಗಳ ಸಮೂಹ. ಆಲ, ಬಿಲ್ವ, ಆಮಲಕಿ, ಅಶ್ವತ್ಥ ಮತ್ತು ಅಶೋಕ – ಇವೇ ಆ ಮರಗಳು. ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಕಳೆದ ಆರಂಭದ ದಿನಗಳಲ್ಲಿ ಒಂದು 'ಪಂಚವಟಿ' ಇತ್ತು. ಅಲ್ಲಿ ಬೃಹದಾಕಾರದ ಅಶ್ವತ್ಥ ವೃಕ್ಷಗಳು ಹಾಗೂ ಮತ್ತಿತರ ಮರಗಳು ಇದ್ದವು. ಅವುಗಳ ಕೆಳಗೆ ಕುಳಿತುಕೊಂಡು ಶ್ರೀರಾಮಕೃಷ್ಣರು ಅಭೂತಪೂರ್ವ ರೀತಿಯಲ್ಲಿ ಆಧ್ಯಾತ್ಮಿಕ ಸಾಧನೆಗಳನ್ನು ಆಚರಿಸಿದರು. ಅವರ ಜೀವನಚರಿತ್ರೆಯಲ್ಲಿ ಹೀಗೆ ಬರೆದಿದೆ: "ಆ ದಿನಗಳಲ್ಲಿ ಪಂಚವಟಿಯನ್ನು ಸುತ್ತುವರೆದಿದ್ದ ಭೂಮಿಯು ಗುಂಡಿಗಳು, ಕಂದಕಗಳು, ತಗ್ಗುಪ್ರದೇಶಗಳು, ಕಾಡು – ಇವುಗಳಿಂದ ಕೂಡಿತ್ತು. ದಟ್ಟಡವಿಯ ಜೊತೆಗೆ ಇದೊಂದು ಶ್ಮಶಾನ ಕ್ಷೇತ್ರವೂ ಆಗಿತ್ತು. ಆದ್ದರಿಂದ ಜನರು ಹಗಲಿನ ಹೊತ್ತು ಕೂಡ ಅಲ್ಲಿಗೆ ಹೋಗುತ್ತಿರಲಿಲ್ಲ. ಆ ಮಾರ್ಗದಲ್ಲಿ ಹೋದರೂ ಕೂಡ, ಕಾಡಿನೊಳಗೆ ಅಪ್ಪಿತಪ್ಪಿಯೂ ಪ್ರವೇಶಿಸುತ್ತಿರಲಿಲ್ಲ. ಆದ್ದರಿಂದ ರಾತ್ರಿಯ ವೇಳೆಯಲ್ಲಿ ಯಾರಾದರೂ ಅಲ್ಲಿ ಹೋಗುವುದಂತೂ ದೂರದ ಮಾತೇ ಸರಿ. ಭೂತಗಳ ಭಯದಿಂದ ಯಾರೂ ಅಲ್ಲಿ ನುಸುಳಲೂ ಎಣಿಸುತ್ತಿರಲಿಲ್ಲ." ಇಲ್ಲಿ ಶ್ರೀರಾಮಕೃಷ್ಣರು ಹಿಂದೆಂದೂ ಯಾರೂ ಕೇಳಿಲ್ಲದ, ಎಣೆಯಿಲ್ಲದ ಆಧ್ಯಾತ್ಮಿಕ ಸಾಧನೆಗಳನ್ನು ಆಚರಿಸಿದರು. ಶ್ರೀರಾಮಕೃಷ್ಣರ ಕಾಲಾವಧಿಯಲ್ಲಿಯೇ, ಅಶ್ವತ್ಥವೃಕ್ಷದ ಹೊರತಾಗಿ ಪಂಚವಟಿಯು ನಿಶ್ಶೇಷವಾಗಿತ್ತು. ಆ ಅಶ್ವತ್ಥವೃಕ್ಷವೂ ಅನಂತರ ಬೆಂಕಿಗೆ ತುತ್ತಾಯಿತು. ನಾವೀಗ ನೋಡುವ ಮರ, ಆಮೇಲೆ ನೆಟ್ಟದ್ದು.



ಹೀಗಾಗಿ ಶ್ರೀರಾಮಕೃಷ್ಣರು ಹೊಸ ಪಂಚವಟಿಯನ್ನು ನೆಟ್ಟಿದ್ದರು. ಅವರು ಆಲದಮರವನ್ನು ನೆಟ್ಟರು. ಅವರ ಸೋದರಳಿಯನಾದ ಹೃದಯರಾಮನು ಅಶ್ವತ್ಥ ಮುಂತಾದ ಇತರ ಮರಗಳನ್ನು ಹಾಕಿದನು. ಈ ಎಲ್ಲ ಮರಗಳ ಪೈಕಿ ಉಳಿದುಕೊಂಡಿರುವುದು ಎಂದರೆ, ಒಂದು ಆಲದಮರ ಮಾತ್ರ. ಅದರ ಪಕ್ಕದಲ್ಲಿಯೇ ಒಂದು ಕುಟೀರ ಇದೆ (ಚಿತ್ರ ನೋಡಿ). ಈ ಸ್ಥಳದಲ್ಲಿಯೇ ತೋತಾಪುರಿಯ ಮಾರ್ಗದರ್ಶನದಲ್ಲಿ ಶ್ರೀರಾಮಕೃಷ್ಣರು ವೇದಾಂತ ಸಾಧನೆಯನ್ನು ಕೈಗೊಂಡದ್ದು; ಪರಬ್ರಹ್ಮನೊಡನೆ ಏಕತೆಯನ್ನು ಸಾಕ್ಷಾತ್ಕರಿಸಿಕೊಂಡ ಸಮಾಧಿಯ ಅನುಭೂತಿಯನ್ನು ನಿರಂತರವಾಗಿ ಮೂರು ದಿನಗಳ ಕಾಲ ಅನುಭವಿಸಿದ್ದು. ಆ ಕಾಲದಲ್ಲಿ ಅವರಿಗೆ ಕಿಂಚಿತ್ತೂ ಬಾಹ್ಯಪ್ರಜ್ಞೆ ಇರಲಿಲ್ಲ.

ಶ್ರೀರಾಮಕೃಷ್ಣರು ಪಂಚವಟಿಯಲ್ಲಿ ಲೆಕ್ಕವಿಲ್ಲದಷ್ಟು ದರ್ಶನಗಳನ್ನು ಪಡೆದುಕೊಂಡಿದ್ದಾರೆ. ಅವರು ಸೀತಾದೇವಿಯ ದರ್ಶನವನ್ನು ಪಡೆದುಕೊಂಡ ಬಗೆಯನ್ನು ಅವರಿಂದಲೇ ಕೇಳೋಣ: " ಆಗ ನಾನು ಒಂದು ದಿನ ಪಂಚವಟಿಯಲ್ಲಿ ಕುಳಿತಿದ್ದೆ. ನಾನೇನೂ ಧ್ಯಾನ ಮಾಡುತ್ತಿರಲಿಲ್ಲ. ಹಾಗೆಯೇ ಕುಳಿತುಕೊಂಡಿದ್ದೆ. ಆ ಸಮಯದಲ್ಲಿ ಹತ್ತಿರದಲ್ಲಿ ಒಂದು ಸ್ತ್ರೀಮೂರ್ತಿ ಸುತ್ತಲಿನ ಪ್ರವೇಶವನ್ನೆಲ್ಲಾ ಬೆಳಗಿಸುತ್ತಾ ಪ್ರತ್ಯಕ್ಷವಾಯಿತು. ಕೇವಲ ಆ ಮೂರ್ತಿಯೊಂದನ್ನೇ ನಾನು ನೋಡುತ್ತಿರಲಿಲ್ಲ. ಸುತ್ತಲಿನ ಮರ ಗಿಡ ನದಿ – ಎಲ್ಲ ನನಗೆ ಕಾಣಿಸುತ್ತಿದ್ದವು. ಅದು ಮಾನವ ಮೂರ್ತಿ. ಏಕೆಂದರೆ ದೇವಿಯ ಮೂರ್ತಿಗಿರುವಂತೆ, ಅದಕ್ಕೆ ಮೂರು ಕಣ್ಣುಗಳಿರಲಿಲ್ಲ. ಆದರೆ ಆ ಮುಖಮುದ್ರೆಯಲ್ಲಿ ಕಂಡುಬರುತ್ತಿದ್ದ ಪ್ರೇಮ, ದುಃಖ, ಕರುಣೆ, ಸಹಿಷ್ಣುತೆಯ ಅಪೂರ್ವ ತೇಜಸ್ಸು ಮತ್ತು ಗಾಂಭೀರ್ಯ ದೇವಿಯ ಮೂರ್ತಿಗಳಲ್ಲಿಯೂ ಕಂಡು ಬರುತ್ತಿರಲಿಲ್ಲ. ಪ್ರಸನ್ನದೃಷ್ಟಿಯಿಂದ ಮುಗ್ಧಗೊಳಿಸುತ್ತ ಆ ದೇವೀಮಾನವಿಯು ನಿಧಾನವಾಗಿ ಹೆಜ್ಜೆಹಾಕುತ್ತ ನನ್ನೆಡೆಗೆ ಬರುತ್ತಿದ್ದಳು. ನಾನು ಚಕಿತನಾಗಿ 'ಯಾರಿದು' ಎಂದು ಯೋಚಿಸತೊಡಗಿದೆ. ಅಷ್ಟುಹೊತ್ತಿಗೆ ಸರಿಯಾಗಿ ಎಲ್ಲಿಂದಲೋ ಒಂದು ಕಪಿಯು ಓಡಿಬಂದು ಆಕೆಯ ಪಾದದಡಿಯಲ್ಲಿ ಹೊರಳಾಡತೊಡಗಿತು. ಆಗ ನನ್ನ ಮನಸ್ಸಿಗೆ ಹೊಳೆಯಿತು, 'ಸೀತೆ, ಜನ್ಮಾವಧಿ ದುಃಖವನ್ನು ಅನುಭವಿಸಿದ ಸೀತೆ, ಜನಕರಾಜಕುಮಾರಿ ಸೀತೆ, ರಾಮಪ್ರಾಣಳಾಗಿದ್ದ ಸೀತೆ!' ಆಗ 'ತಾಯಿ, ತಾಯಿ' ಎಂದು ಆತುರದಿಂದ ಆಕೆಯ ಪಾದಕ್ಕೆರಗಬೇಕೆನ್ನುವಷ್ಟರಲ್ಲಿ ಆಕೆ (ತಮ್ಮ ದೇಹವನ್ನು ನಿರ್ದೇಶಿಸಿ) ಇದನ್ನು ಪ್ರವೇಶಿಸಿದಳು. ನಾನು ಆನಂದ ಮತ್ತು ವಿಸ್ಮಯಗಳ ವಶನಾಗಿ ಬಾಹ್ಯಪ್ರಜ್ಞೆ ಕಳೆದುಕೊಂಡು ಬಿದ್ದುಬಿಟ್ಟೆ." ಪಂಚವಟಿ ಸಮೀಪವಿರುವ 'ಹಂಸಪುಕುರ' ಎಂಬ ಕೊಳವು ಶ್ರೀರಾಮಕೃಷ್ಣರ ಕಾಲದಿಂದಲೂ ಇದೆ.

## ಬಿಲ್ವಪತ್ರೆ ಮರ

ಇಲ್ಲಿಂದ ಇನ್ನೂ ಮುಂದೆ, ಉತ್ತರದಿಕ್ಕಿಗೆ ಹೋದರೆ, ಗೋಡೆಗಳ ಆವರಣದ ಮಧ್ಯೆ ಇರುವ ಬಿಲ್ವಪತ್ರೆ ಮರವನ್ನು ನೋಡಬಹುದು. ಭೈರವೀ ಬ್ರಾಹ್ಮಣಿಯ ಮಾರ್ಗದರ್ಶನದಲ್ಲಿ ಶ್ರೀರಾಮಕೃಷ್ಣರು ತಾಂತ್ರಿಕ ಸಾಧನೆಗಳನ್ನು ಕೈಗೊಂಡದ್ದು ಇಲ್ಲಿಯೇ. ಅವರು ಈ ವಿಷಯವಾಗಿ ಹೇಳುತ್ತಿದ್ದರು, "ಈ ಬಿಲ್ವಪತ್ರೆ ಮರದ ಕೆಳಗೆ ನಾನು ಪಡೆದುಕೊಂಡ ಅನುಭವಗಳಿಗೆ ಮತ್ತು ದರ್ಶನಗಳಿಗೆ ಎಣೆಯೇ ಇಲ್ಲ. ಅವೆಲ್ಲವೂ ಅಸಾಮಾನ್ಯವಾದುವು." ಹಿಂದಿನ ಬಿಲ್ವಪತ್ರೆ ಮರ ಈಗ ಇಲ್ಲ. ಈಗ ಇರುವ ಮರ ಆ ಸ್ಥಾನವನ್ನು ಗುರುತಿಸಲಿಕ್ಕೆ ನೆಟ್ಟಿರುವ ಮರ ಮಾತ್ರ.

ದಕ್ಷಿಣೇಶ್ವರದ ಕೆಲವು ಮಹತ್ವದ ಸ್ಥಾನಗಳ ಪರಿಚಯವನ್ನು ಮಾಡಿಕೊಂಡೆವು. ಅವುಗಳಿಗೆ ಭೇಟಿಕೊಡುವಾಗ, ಅವುಗಳಿಗೆ ಸಂಬಂಧಪಟ್ಟ ಘಟನೆಗಳನ್ನು ಮನನ ಮಾಡುವುದೇ ಒಂದು ರೀತಿಯ ಆಧ್ಯಾತ್ಮಿಕ ಸಾಧನೆಯಾಗಬಲ್ಲುದು.

(*ಮುಂದೆ ನಿರೀಕ್ಷಿಸಿ :* **ಬನ್ನಿ, ರಾಮಕೃಷ್ಣರ ಕೊಲ್ಕತಾಗೆ**)